# ಮೇ 10 ರಂದು ಬಸವ ಜಯಂತಿ ಆಚರಣೆ

ಕೊಪ್ಪಳ: ಬಸವ ಜಯಂತ್ಯೋತ್ಸವ ಸಮಿತಿ ಕೊಪ್ಪಳ ಮತ್ತು ವಿವಿಧ ಕೊಪ್ಪಳದ ಬಸವಾನುಯಾಯಿಗಳ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ದಿನಾಂಕ:10–05–2024ರ ಶುಕ್ರವಾರದಂದು ವಿಶ್ವಗುರು ಬಸವೇಶ್ವರ ಜಯಂತ್ಯೋತ್ಸವ ಸಮಾರಂಭವನ್ನು ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 9:00 ಗಂಟೆಗೆ ನಗರದ ಬಸವೇಶ್ವರ ವೃತ್ತದಲ್ಲಿ ಷಟಸ್ಥಲ ಧ್ವಜಾರೋಹಣ ನೆರವೇರಲಿದೆ. ಸಂಜೆ 4:30 ಗಂಟೆಗೆ ಕೋಟೆ ರಸ್ತೆಯ ಮಹೇಶ್ವರ ದೇವಸ್ಥಾನದಿಂದ ಶಾರದಾ ಚಿತ್ರಮಂದಿರ ಮಾರ್ಗವಾಗಿ ಶ್ರೀ ಗವಿಮಠದ ಆವರಣದವರೆಗೆ ಶ್ರೀ ಬಸವೇಶ್ವರ ಭಾವಚಿತ್ರದ ಭವ್ಯ ಮೆರವಣಿಗೆ ಇರುತ್ತದೆ. ಸಂಜೆ 6:00 ಗಂಟೆಗೆ ಶ್ರೀ ಗವಿಮಠದ ಆವರಣದಲ್ಲಿ ಬಸವಗೋಷ್ಠಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪೂಜ್ಯ ಶ್ರೀ ಮ.ನಿ.ಪ್ರ.ಸ್ವ.ಜ. ಗವಿಸಿದ್ಧೇಶ್ವರ ಮಹಾಸ್ವಾಮಿಗಳು, ಸಂಸ್ಥಾನ ಶ್ರೀ ಗವಿಮಠ ಕೊಪ್ಪಳ ಇವರ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪೂಜ್ಯ ಶ್ರೀ ಸಿದ್ಧಬಸವ ಕಬೀರ ಮಹಾಸ್ವಾಮಿಗಳು, ಶ್ರೀ ಜಗದ್ಗುರು ಮರುಳಶಂಕರದೇವರ ಗುರುಪೀಠ, ಚಿಗರಹಳ್ಳಿ, ತಾ॥ಜೇವರ್ಗಿ ಇವರು ಆಗಮಿಸಲಿದ್ದಾರೆ. ಮತ್ತು ಶರಣೆ ಗಂಗಾಂಬಿಕಾ ಬಸವರಾಜ ಪಾಟೀಲ್, ಬಸವ ಚಿಂತಕರು ಭದ್ರಾವತಿ ಇವರು ಅನುಭಾವ ನೀಡಲಿದ್ದಾರೆ.

ಈ ಕಾರ್ಯಕ್ರಮದಲ್ಲಿ ವಚನ ಸಂಗೀತ ಮತ್ತು ವಿವಿಧ ಕ್ಷೇತ್ರದ ಸಾಧಕರಿಗೆ ಬಸವ ಕಾರುಣ್ಯ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಎಲ್ಲಾ ಕಾರ್ಯಕ್ರಮಗಳಿಗೆ ಬಸವಾನುಯಾಯಿಗಳು, ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಬಸವ ಜಯಂತ್ಯೋತ್ಸವ ಸಮಿತಿಯ ಅಧ್ಯಕ್ಷರಾದ ಬಸವರಾಜ ಬಳ್ಳೊಳ್ಳಿಯವರು ಪತ್ರಿಕಾ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

# ಅಸ್ವಸ್ಥಗೊಂಡ ಸಿಬ್ಬಂದಿಗಳಿಗೆ ಆರೋಗ್ಯ ಇಲಾಖೆಯಿಂದ ತ್ವರಿತ ಚಿಕಿತ್ಸೆ, ಗುಣಮುಖ

ಬಳ್ಳಾರಿ ಮೇ. 07 : ಲೋಕಸಭಾ ಸಾರ್ವತ್ರಿಕ ಚುನಾವಣೆ ಸಂಬಂಧ ಮಂಗಳವಾರದಂದು ಜರುಗಿದ ಮತದಾನ ಪ್ರಕ್ರಿಯೆ ಸಂದರ್ಭದಲ್ಲಿ ಜಿಲ್ಲೆಯ ವಿವಿಧೆಡೆ ಅಸ್ವಸ್ಥಗೊಂಡ ಮತಗಟ್ಟೆ ಸಿಬ್ಬಂದಿಗೆ ಆರೋಗ್ಯ ಇಲಾಖೆ ತ್ವರಿತವಾಗಿ ಸ್ಪಂದಿಸಿ, ಸೂಕ್ತ ಚಿಕಿತ್ಸೆ ನೀಡುವ ಮೂಲಕ ಗುಣಮುಖರನ್ನಾಗಿಸಿದೆ. ಬಳ್ಳಾರಿ ಜಿಲ್ಲೆಯಲ್ಲಿ ಚುನಾವಣಾ ಕಾವು ಒಂದೆಡೆಯಾದರೆ, ಬಿರು ಬೇಸಿಗೆಯ ಬಿಸಿಲು ಜನರನ್ನು ಹೈರಾಣಾಗಿಸಿದೆ. ಇದಕ್ಕೆ ಚುನಾವಣಾ ಕರ್ತವ್ಯಕ್ಕೆಂದು ವಿವಿಧೆಡೆ ಮತಗಟೆಗಳಿಗೆ ತೆರಳಿದ್ದ ಅಧಿಕಾರಿ, ಸಿಬ್ಬಂದಿ ಕೂಡ ಹೊರತಾಗಲಿಲ್ಲ. ಜಿಲ್ಲೆಯ ಕುಡಿತಿನ ಗ್ರಾಮದ ಮತದಾನ ಕೇಂದ್ರವೊಂದರ ಸಿಬ್ಬಂದಿ ರವಿಚಂದ್ರ ಎನ್ನುವವರು ರಕ್ತದೊತ್ತಡ ಸಮಸ್ಯೆಯಿಂದ ಅಸ್ವಸ್ಥಗೊಂಡರು. ಆರೋಗ್ಯ ಇಲಾಖೆಗೆ ಮಾಹಿತಿ ದೊರೆತಾಕ್ಷಣ ಆಂಬುಲೆನ್ಸ್ ಮೂಲಕ ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕಳುಹಿಸಿಕೊಡಲಾಯಿತು. ಇಲ್ಲಿನ ವೈದ್ಯ ಡಾ. ಗೋಪಾಲರಾವ್ ನೇತೃತ್ವದಲ್ಲಿ ಹೆಚ್ಚಿನ ಚಿಕಿತ್ಸೆ ನೀಡಲಾಗಿದ್ದು, ಸಿಬ್ಬಂದಿ ರವಿಚಂದ್ರ ಅವರು ಗುಣಮುಖರಾಗಿದ್ದಾರೆ.



ಬಳ್ಳಾರಿ ತಾಲ್ಲೂಕು ಕೊಳಗಲ್ ಗ್ರಾಮದ ಮತದಾನ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಲಕ್ಷ್ಮೀದೇವಿ ಅವರು ರಕ್ತದೊತ್ತಡ ಪ್ರಮಾಣ ಕಡಿಮೆಯಾದ ಕಾರಣದಿಂದ ಪ್ರಜ್ಞಾಹೀನರಾದರು. ತಕ್ಷಣವೇ ಎಚ್ಚೆತ್ತ ಇಲ್ಲಿನ ಸಿಬ್ಬಂದಿ ತಕ್ಷಣವೇ ಆಂಬುಲೆನ್ಸ್ ಮೂಲಕ ವಿಮ್ಸ್‌ಗೆ ದಾಖಲಿಸಿ, ಚಿಕಿತ್ಸೆ ನೀಡಲಾಯಿತು.

ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ. ಅಬ್ದುಲ್ಲಾ, ಸಿದ್ದಮ್ಮನಹಳ್ಳಿ ವೈದ್ಯಾಧಿಕಾರಿ ಡಾ. ದಿವ್ಯಾ ಅವರು ನಿಗಾ ವಹಿಸಿ, ಉತ್ತಮ ಚಿಕಿತ್ಸೆ ನೀಡಿದ್ದು, ಲಕ್ಷ್ಮೀದೇವಿ ಅವರು ಗುಣಮುಖರಾಗಿದ್ದಾರೆ.ಬಂಡಿಹಟ್ಟಿ ವ್ಯಾಪ್ತಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ಗೋಡೆವಾಲ) ನಲ್ಲಿನ ಮತದಾನ ಕೇಂದ್ರದ ಮತಗಟ್ಟೆ ಅಧಿಕಾರಿ ಶೋಭಾರಾಣಿ ಅವರು ಅಸ್ವಸ್ಥಗೊಂಡು ಪ್ರಜ್ಞಾಹೀನರಾಗಿ ಕುಸಿದು ಬಿದ್ದರು. ಕೂಡಲೆ ಬಂಡಿಹಟ್ಟಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಸಹಿತ ವೈದ್ಯಕೀಯ ತಂಡದೊಂದಿಗೆ ಆಂಬುಲೆನ್ಸ್‌ನಲ್ಲಿ ವಿಮ್ಸ್‌ಗೆ ದಾಖಲಿಸಿ ಹೆಚ್ಚಿನ ಚಿಕಿತ್ಸೆ ನೀಡಲಾಯಿತು. ಶೋಭಾರಾಣಿ ಅವರು ಚಿಕಿತ್ಸೆಗೆ ಸ್ಪಂದಿಸಿ ಗುಣಮುಖರಾಗಿ, ಮನೆಗೆ ತೆರಳಿದರು. ಚುನಾವಣೆ ಸಂಬಂಧ ಮತದಾನ ಪ್ರಕ್ರಿಯೆಗಾಗಿ ಮತಗಟ್ಟೆ ಕೇಂದ್ರದ ಕರ್ತವ್ಯಕ್ಕೆ ನಿಯೋಜಿತಗೊಂಡು, ವಿವಿಧ ಕಾರಣಗಳಿಗಾಗಿ ಅಸ್ವಸ್ಥಗೊಂಡ ಸಿಬ್ಬಂದಿಗಳಿಗೆ ಆರೋಗ್ಯ ಇಲಾಖೆಯ ತಕ್ಷಣದ ಸ್ಪಂದನೆ ಹಾಗೂ ತ್ವರಿತ ಚಿಕಿತ್ಸೆಯಿಂದಾಗಿ ಗುಣಮುಖರಾಗಿದ್ದಾರೆ. ಬಿರು ಬಿಸಿಲಿನ ಕಾರಣದಿಂದಾಗಿ ಜಿಲ್ಲಾಡಳಿತ ಮುನ್ನೆಚ್ಚರಿಕಾ ಕ್ರಮವಾಗಿ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಸೇರಿದಂತೆ ಎಲ್ಲ ಸರ್ಕಾರಿ ಆಸ್ಪತ್ರೆಗಳ ವೈದ್ಯರು, ಸಹಾಯಕರು ಹಾಗೂ ನರ್ಸ್‌ಗಳನ್ನು ಯಾವುದೇ ಪರಿಸ್ಥಿತಿ ನಿಭಾಯಿಸಲು ಅನುವಾಗುವಂತೆ ಸಜ್ಜಾಗಿ ಇರಿಸಿದ್ದು, ಇದೀಗ ಆರೋಗ್ಯ ಇಲಾಖೆಯ ತ್ವರಿತ ಸ್ಪಂದನೆ ಪ್ರಶಂಸೆಗೆ ಪಾತ್ರವಾಗಿದೆ.

# ಬೆಳಗಾವಿಯಲ್ಲಿ ಮೊದಲ ಬಾರಿಗೆ ಮತ ಚಲಾಯಿಸಿದ ಜಗದೀಶ ಶೆಟ್ಟರ

ಬೆಳಗಾವಿ: ಬೆಳಗಾವಿ ಲೋಕಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಜಗದೀಶ್?? ಶೆಟ್ಟರ್ ಇದೇ ಮೊದಲ ಬಾರಿ ಇಂದು ಬೆಳಗಾವಿಯಲ್ಲಿ ಮತ ಚಲಾಯಿಸಿದರು. ಇದಕ್ಕೂ ಮುನ್ನ ಶೆಟ್ಟರ್ ತಮ್ಮ ತವರು ಕ್ಷೇತ್ರ ಹುಬ್ಬಳ್ಳಿಯಲ್ಲೇ? ಮತ ಚಲಾಯಿಸುತ್ತಿದ್ದರು. ಆದರೆ, ಬೆಳಗಾವಿ ಅಭ್ಯರ್ಥಿಯಾದ ಬಳಿಕ ತಮ್ಮ ಮತವನ್ನು ಅಲ್ಲಿಗೆ ವರ್ಗಾಯಿಸಿಕೊಂಡಿದ್ದಾರೆ.

ಸೊಸೆ ಶ್ರದ್ಧಾ ಶೆಟ್ಟರ್, ಸಂಸದೆ ಮಂಗಲ ಅಂಗಡಿ ಅವರ ಜೊತೆಗೆ ವಿಶ್ವೇಶ್ವರಯ್ಯ ನಗರದ ಸರ್ಕಾರಿ ಮಾದರಿ ಕನ್ನಡ ಪ್ರಾಥಮಿಕ ಶಾಲೆ ಸಂಖ್ಯೆ 26ರ ಮತಗಟ್ಟೆಗೆ ಆಗಮಿಸಿದ ಶೆಟ್ಟರ್, ಸರತಿ ಸಾಲಿನಲ್ಲಿ ನಿಂತು ಮತ ಹಾಕಿದರು. ಮತಗಟ್ಟೆಯಿಂದ ಹೊರಬಂದ ಬಳಿಕ ವಿಜಯದ ಸಂಕೇತ ಪ್ರದರ್ಶಿಸಿದರು.ಮತ ಹಾಕಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಶೆಟ್ಟರ್, “ಅಧಿಕ ಸಂಖ್ಯೆಯಲ್ಲಿ ಜನರು ಆಗಮಿಸಿ ಮತ ಚಲಾಯಿಸುತ್ತಿದ್ದಾರೆ. ಮತದಾನದ ಮಹತ್ವದ ಬಗ್ಗೆ ಜನರಲ್ಲಿ ಸಾಕಷ್ಟು ಜಾಗೃತಿ ಮೂಡಿದೆ. ಆದರೆ ಕೆಲ ಪಕ್ಷಗಳು ಕಳೆದ ಎರಡು ದಿನಗಳಿಂದ ಹಣ ಹಂಚುವುದು ಬಿಟ್ಟರೆ, ಮತದಾರರನ್ನು ಮನವೊಲಿಸುವ ಕೆಲಸ ಮಾಡಲಿಲ್ಲ. ಹಣದ ಹಂಚಿಕೆ ಮೇಲೆಯೇ ಗೆಲ್ಲುವ ಭ್ರಮೆಯಲ್ಲಿದ್ದಾರೆ. ಆದರೆ, ಮತದಾರರು ಅವರನ್ನು ತಿರಸ್ಕರಿಸಿ, ಸೂಕ್ತ ಉತ್ತರ ಕೊಡುತ್ತಾರೆ. ಹಣ ಮತ್ತು ಅಧಿಕಾರದ ಬಲದ ಮೇಲೆ ಪ್ರಜಾತಂತ್ರ ವ್ಯವಸ್ಥೆ ನಡೆಯುವುದಿಲ್ಲ” ಎಂದು ತಿರುಗೇಟು ಕೊಟ್ಟರು.“ನಮ್ಮ ಸಾಧನೆ ಮತ್ತು ಅಭಿವೃದ್ಧಿ ಕೆಲಸಗಳನ್ನು ಜನರಿಗೆ ತಿಳಿಸಬೇಕಿತ್ತು. ಆದರೆ, ಸೋಲಿನ ಭೀತಿ ಮತ್ತು ಹತಾಶೆಯಿಂದ ಹಣ ಹಂಚಲಾಗುತ್ತಿದೆ. ಈ ಬಗ್ಗೆ ಈಗಾಗಲೇ ಒಂದು ದೂರು ಕೊಟ್ಟಿದ್ದೇವೆ. ಸಂಬಂಧಿಸಿದ ಅಧಿಕಾರಿಗಳು ಗಂಭೀರ ಕ್ರಮ ತೆಗೆದುಕೊಳ್ಳಬೇಕಿದೆ” ಎಂದು ಶೆಟ್ಟರ್ ಆಗ್ರಹಿಸಿದರು. “ಕಳೆದ ಒಂದು ತಿಂಗಳಿನಿಂದ ಬೆಳಗಾವಿ ಯಲ್ಲಿ ಪ್ರಚಾರ ಮಾಡುತ್ತಿದ್ದೇನೆ. ನಮಗೆ ದಿನದಿಂದ ದಿನಕ್ಕೆ ಬೆಂಬಲ ಹೆಚ್ಚಾಗುತ್ತಿದೆ. ಅಲ್ಲದೇ ಮೋದಿ ಅವರು ಮೂರನೇ ಬಾರಿ ಪ್ರಧಾನ ಆಗಬೇಕೆನ್ನುವ ಇಚ್ಛೆ ಜನರದ್ದು. ಹಾಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಗೆ ಜನರು ಆಗಮಿಸುತ್ತಿದ್ದಾರೆ. ಇನ್ನೂ ಜಿಲ್ಲೆಯಲ್ಲಿ ಬಿಸಿಲಿನ ಆರ್ಭಟ ಜೋರಾಗಿದೆ. ಹಾಗಾಗಿ, ಬೇಗ ಬೇಗನೇ ಆಗಮಿಸಿ ಮತ ಚಲಾಯಿಸಿ” ಎಂದು ಶೆಟ್ಟರ್ ಕೋರಿದರು. ಹಾಸನ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಡಿಕೆಶಿ ಆಡಿಯೋ ವೈರಲ್ ವಿಚಾರಕ್ಕೆ ಪ್ರತಿಕ್ರಿಯಿಸುತ್ತಾ, “ಆ ರೀತಿ ಆರೋಪ ಕೇಳಿ ಬಂದಿದೆ. ಆದರೆ, ಡಿಕೆಶಿ ಅದನ್ನು ಅಲ್ಲಗಳೆದಿದ್ದಾರೆ. ಈ ಪ್ರಕರಣದಲ್ಲಿ ಡಿಕೆಶಿ ಹೆಸರು ಮೊದಲಿನಿಂದಲೂ ಕೇಳಿ ಬರುತ್ತಿದೆ. ಎಸ್‌ಐಟಿ ತನಿಖೆಯಿಂದ ನ್ಯಾಯ ಸಿಗುವುದಿಲ್ಲ ಎಂದು ಜೆಡಿಎಸ್ ನಾಯಕರು ಹೇಳುತ್ತಿದ್ದಾರೆ. ಹಾಗಾಗಿ, ಈ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿದರು. ಈ ಚುನಾವಣೆಗೂ, ಪ್ರಜ್ವಲ್ ರೇವಣ್ಣ ಪ್ರಕರಣ ಮತ್ತು ಡಿಕೆಶಿ ಆಡಿಯೋ ವೈರಲ್ ವಿಚಾರಗಳಿಗೂ ಯಾವುದೇ ರೀತಿಯ ಸಂಬಂಧವಿಲ್ಲ. ಯಾವುದೇ ಪರಿಣಾಮವೂ ಬೀರುವುದಿಲ್ಲ” ಎಂದು ಅಭಿಪ್ರಾಯಪಟ್ಟರು. ಸಂಸದೆ ಮಂಗಲ ಅಂಗಡಿ ಮಾತನಾಡಿ, “ಎಲ್ಲೆಡೆ ಮತದಾನ ಚೆನ್ನಾಗಿ ನಡೆಯುತ್ತಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಬೆಳಗ್ಗೆ ಆರೂವರೆ ಸಮಯಕ್ಕೆ ಬಂದು ಜನರು ಸರತಿ ಸಾಲಿನಲ್ಲಿ ನಿಂತಿದ್ದರು ಎಂದು ಕಾರ್ಯಕರ್ತರು ತಿಳಿಸಿದ್ದಾರೆ. ನಮ್ಮ ಯಜಮಾನರು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ ಮತ್ತು ಎರಡು ಬಾರಿ ಜಿಲ್ಲಾ ಉಸ್ತುವಾರಿ ಸಚಿವರಾಗಿ ಶೆಟ್ಟರ್ ಅವರು ಬೆಳಗಾವಿಯಲ್ಲಿ ಅನೇಕ ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಹಾಗಾಗಿ, ಅತಿ ಹೆಚ್ಚು ಮತಗಳ ಅಂತರದಿಂದ ಗೆಲ್ಲುತ್ತಾರೆ” ಎಂದು ವಿಶ್ವಾಸ ವ್ಯಕ್ತಪಡಿಸಿದರು.ಶ್ರದ್ಧಾ ಶೆಟ್ಟರ್ ಮಾತನಾಡಿ, ಇಡೀ ಕ್ಷೇತ್ರದಲ್ಲಿ ಬಿಜೆಪಿಗೆ ಉತ್ತಮ ಸ್ಪಂದನೆಯಿದೆ.

# ಲೋಕಸಭಾ ಚುನಾವಣೆ; ಗದಗ ಜಿಲ್ಲೆಯಾದ್ಯಂತ ಬಿರುಸಿನ ಮತದಾನ

(1 ನೇ ಪುಟದಿಂದ)

ಮುಳಗುಂದ ನಾಕಾ ಬಳಿಯ ನೀರಾವರಿ ಇಲಾಖೆ ಕಚೇರಿಯ ಮತಗಟ್ಟೆ ಸಂಖ್ಯೆ 124 ರಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ ಅವರು ಮತ ಚಲಾಯಿಸಿ ಮತದಾನದ ಮಹತ್ವ ಮತ್ತು ಮೌಲ್ಯದ ಸಂದೇಶ ಸಾರಿದರು. ಈ ಸಂದರ್ಭದಲ್ಲಿ ಜಿ.ಪಂ.ಸಿಇಒ ಎಸ್.ಭರತ್ ಇದ್ದರು.ಅಲ್ಲಿನ ಮತಗಟ್ಟೆಯಲ್ಲಿ ಬೆಳಗಿನಿಂದಲೇ ಸರತಿ ಸಾಲಿನಲ್ಲಿ ನಿಂತು ಹಿರಿಯರು, ಯುವಜನರು ಸೇರಿದಂತೆ ಎಲ್ಲರೂ ಮತದಾನ ಮಾಡಿದರು. ಅಲ್ಲಿನ ಯುವ ಮತದಾರರೊಬ್ಬರು ಪ್ರಥಮ ಬಾರಿಗೆ ಮತದಾನ ಮಾಡಿ ತುಂಬ ಸಂತಸ ತಂದಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.ಲಕ್ಷ್ಮೇಶ್ವರ ಮತಗಟ್ಟೆಗಳಲ್ಲಿ ಅರ್ಹರೆಲ್ಲರೂ ಉತ್ಸಾಹದಿಂದ ಮತ ಹಕ್ಕು ಚಲಾಯಿಸಿದ್ದು ಕಂಡುಬಂ ದಿತು. ಅಲ್ಲಿನ ಸ್ಥಳೀಯ ಗ್ರಾಮಸ್ಥರು ಮಾತನಾಡಿ ಗ್ರಾಮದ ಜನರು ಮತದಾನದ ಹಬ್ಬದಲ್ಲಿ ಪಾಲ್ಗೊಂಡಿದ್ದಾರೆ. ಜಿಲ್ಲೆಯಿಂದ ಹೊರಗಿರುವ ವರೂ ಸಹ ಊರಿಗೆ ಆಗಮಿಸಿ ಮತದಾನ ಮಾಡಿದ್ದಾರೆ ಎಂದು ವಿವರಿಸಿ ದರು. ಜಿಲ್ಲೆಯ ವಿವಿಧ ಕಡೆ ಸ್ಥಾಪಿಸಲಾಗಿದ್ದ ಸಖಿ, ವಿಶೇಷ ಚೇತನರ ಸ್ನೇಹಿ ಮತಗಟ್ಟೆ, ಯುವ ಮತದಾರರ ಮತಗಟ್ಟೆ, ಸಾಂಪ್ರದಾಯಿಕ ಮತಗಟ್ಟೆ, ಥೀಮ್ ಬೇಸಡ್ ಮತಗಟ್ಟೆ ಸ್ಥಾಪಿಸಲಾಗಿತ್ತು. ಈ ಮತಗಟ್ಟೆಗಳು ಮತದಾರರ ಗಮನ ಸೆಳೆದವು.ಜಿಲ್ಲೆಯ ನರಗುಂದ, ಗಜೇಂದ್ರಗಡ, ರೋಣ, ಶಿರಹಟ್ಟಿ, ಮುಂಡರಗಿ ಸೇರಿದಂತೆ ಹಲವು ಮತಗಟ್ಟೆಗಳಲ್ಲಿ ಮತದಾರರು ಮಧ್ಯಾಹ್ನದ ವೇಳೆಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಮತದಾನದಲ್ಲಿ ಪಾಲ್ಗೊಂಡಿದ್ದು ಕಂಡುಬಂದಿತು. ಸುಮಾರು 70 ವರ್ಷ ಮೇಲ್ಪಟ್ಟ ಒಬ್ಬರು ಗಾಲಿ ಕುರ್ಚಿಯಿಲ್ಲಿ ಕುಟುಂಬದ ಸದಸ್ಯರೊಂದಿಗೆ ಆಗಮಿಸಿ ಮತ ಹಕ್ಕು ಚಲಾಯಿಸಿದರು. ಮತಗಟ್ಟೆಯಲ್ಲಿ ಕುಡಿಯುವ ನೀರು ಸೌಲಭ್ಯವನ್ನು ಕಲ್ಪಿಸಲಾಗಿತ್ತು.ಗದಗ ನಗರದ ಎಸ್.ಎಂ.ಕೃಷ್ಣನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ಸ್ಥಾಪಿಸಲಾಗಿದ್ದ ಸಖಿ ಮತಗಟ್ಟೆ, ವೀರನಾರಾಯಣ ದೇವಸ್ಥಾನದ ಬಳಿ ಸ್ಥಾಪಿಸಲಾಗಿದ್ದ ಥೀಮ್ ಬೇಸಡ್ ಮತಗಟ್ಟೆ, ಕಬಲಾಯತಕಟ್ಟಿಯ ಸರ್ಕಾರಿ ಕನ್ನಡ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ಥಾಪಿಸಲಾಗಿದ್ದ ಸಾಂಪ್ರದಾಯಿಕ ಮತಗಟ್ಟೆ, ಬೆಟಗೇರಿಯ ಎಪಿಎಂಸಿ ಕಚೇರಿಯ ಬಲಗಡೆ ಸ್ಥಾಪಿಸಲಾಗಿದ್ದ ವಿಶೇಷಚೇತನರ ಸ್ನೇಹಿ ಮತಗಟ್ಟೆ, ಮುಂಡರಗಿಯ ಶಿವಾಜಿನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ಸ್ಥಾಪಿಸಲಾಗಿದ್ದ ಯುವ ಮತಗಟ್ಟೆಗಳು ಗಮನ ಸೆಳೆಯಿತು.ಲೋಕಸಭಾ ಚುನಾವಣೆಯು ಮತದಾರರಲ್ಲಿ ಸಂಭ್ರಮ ಜೊತೆಗೆ ಹೊಣೆಗಾರಿಕೆಯನ್ನು ಹೆಚ್ಚಿಸಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಯನ್ನು ಮತದಾರರ ಹಬ್ಬವೆಂದು ಪರಿಗಣಿಸಲಾಗಿದೆ. ಪ್ರಜಾಪ್ರಭುತ್ವದ ಆಶಯ ಸಾಕಾರವಾಗುವಲ್ಲಿ ಚುನಾವಣೆಯ ಪಾತ್ರ ಬಹು ದೊಡ್ಡದು ಎಂದು ಹಿರಿಯ ಮತದಾರರು ಅಭಿಪ್ರಾಯ ವ್ಯಕ್ತಪಡಿಸಿದರು.’ಜಿಲ್ಲೆಯ ವಿವಿಧ ಮತಗಟ್ಟೆಗಳಲ್ಲಿ ಕುಟುಂಬದವರ ಜೊತೆಗೆ ಆಗಮಿಸಿ ಸೆಲ್ಫಿ ಫೋಟೊ ತೆಗೆಸಿಕೊಂಡವರ ದೃಶ್ಯ ಕಂಡುಬಂದಿತು. ಒಟ್ಟಾರೆ ಗದಗ ಜಿಲ್ಲೆಯಲ್ಲಿ ಶಾಂತಿಯುತ ಹಾಗೂ ಉತ್ಸಾಹದಿಂದ ಮತದಾನದಲ್ಲಿ ಮತದಾರರು ಪಾಲ್ಗೊಂಡಿದ್ದು ವಿಶೇಷವಾಗಿತ್ತು.

# ಲೋಕಸಭಾ ಚುನಾವಣೆಯ ಮತದಾನ ಸುಗಮ ಆರಂಭ, ಶಾಂತಿಯುತ

(1 ನೇ ಪುಟದಿಂದ)

ಕ್ಷೇತ್ರದ ಮಲಪನಗುಡಿಯ ಎಲ್ ಭರಮಪ್ಪ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿನ ಮತಗಟ್ಟೆ 229ರ ಸಖಿ ಮತಗಟ್ಟೆಗೆ ಭೇಟಿ ನೀಡಿ ಪರಿಶೀಲಿಸಿದರು. ಬಳಿಕ ಹತ್ತಿರದಲ್ಲಿನ 228, 229, 230, 231 ಹಾಗೂ 232 ಮತಗಟ್ಟೆಗಳಿಗೆ ಸಹ ಭೇಟಿ ನೀಡಿ ಪರಿಶೀಲಿಸಿದರು. ಮತಗಟ್ಟೆಗೆ ಮತದಾನ ಮಾಡಲು ಆಗಮಿಸಿದ ವಯೋವೃದ್ಧೆಯೊಂದಿಗೆ ಸಿಇಓ ಅವರು ಆತ್ಮೀಯವಾಗಿ ಮಾತನಾಡಿ ಮತಗಟ್ಟೆಗೆ ಕಳುಹಿಸಿದರು.

ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮ ಪಂಚಾಯತಿಗಳಲ್ಲಿ ಮತದಾನ ಪ್ರಕ್ರಿಯೆಯು ಶಾಂತಯುತವಾಗಿ ಆರಂಭವಾಯಿತು. ಹರಪನಹಳ್ಳಿಯ ಉಪ್ಪಾರಗೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆಯಲ್ಲಿ ವಿಶೇಷಚೇತನ ಮತದಾರ ಕೋಟೆಪ್ಪ ಅವರು ಬೆಳಗ್ಗೆಯೇ ಮತಹಕ್ಕನ್ನು ಚಲಾಯಿಸಿದರು. ಕೂಡ್ಲಿಗಿ ವಿಧಾನಸಭಾ ಕ್ಷೇತ್ರದಲ್ಲಿ ವಿಶೇಷಚೇತನರು ವಿವಿಧ ಮತಗಟ್ಟೆಗಳಿಗೆ ತೆರಳಿ ಮತದಾನ ಮಾಡಿದರು. ಕೂಡ್ಲಿಗಿ ಪಟ್ಟಣದ ರಾಜೀವ್‌ಗಾಂಧಿ ನಗರದಲ್ಲಿರುವ ಸಖಿ ಮತಗಟ್ಟೆಯಲ್ಲಿ ಶಿಲ್ಪ ಮತ್ತು ಷಮಿನ ಭಾನು ಅವರು ಪ್ರಥಮ ಬಾರಿಗೆ ಮತ ಚಲಾಯಿಸಿ ಅನಿಸಿಕೆ ವ್ಯಕ್ತಪಡಿಸಿದರು.

ಸಸಿ ನೀಡಿ ಸ್ವಾಗತ: ಹಡಗಲಿ ತಾಲೂಕಿನ ಇಟ್ಟಗಿ ಗ್ರಾಮ ಪಂಚಾಯಿತಿಯ ಮತಗಟ್ಟೆ ಸಂಖ್ಯೆ 162ರ ಸಖಿ ಮತಗಟ್ಟೆಗೆ ಮತದಾನ ಮಾಡಲು ಬರುತ್ತಿದ್ದ 100 ಮತದಾರರಿಗೆ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಉಮೇಶ ಎಂ ಅವರು ಸಸಿ ನೀಡಿ ಪ್ರೋತ್ಸಾಹಿಸಿದರು. ಕರ್ತವ್ಯ ನಿರತ ಸಿಬ್ಬಂದಿ ಜೊತೆಗೆ ಚರ್ಚಿಸಿದರು. ಪಿಡಿಓ ಉಮೇಶ್ ಜಾಗೀರ್ ಹಾಗೂ ಗ್ರಾಪಂ ಸಿಬ್ಬಂದಿ ಉಪಸ್ಥಿತರಿದ್ದರು. ದಬೈನಿಂದ ಆಗಮಿಸಿ ಮತದಾನ: ದುಬೈನಿಂದ ಆಗಮಿಸಿದ ಐಮನ್ ಸಫೂರ ಎಂಬುವರು ಹರಪನಹಳ್ಳಿ ಪಟ್ಟಣದ ಉಪ್ಪಾರಗೇರಿ ಮತಗಟ್ಟೆ 87ರಲ್ಲಿ ಮತ ಹಕ್ಕು ಚಲಾಯಿಸಿ ಸಂಭ್ರಮಿಸಿದರು.

# ಲೋಕಸಭಾ ಚುನಾವಣೆ: ಚುನಾವಣಾ ರಾಯಭಾರಿ, ಲಿಂಗತ್ವ ಅಲ್ಪಸಂಖ್ಯಾತರಿಂದ ಮತದಾನದ ಪ್ರೇರಣೆ



ಹೊಸಪೇಟೆ (ವಿಜಯನಗರ) ಮೇ 07–: ಲೋಕಸಭಾ ಚುನಾವಣೆ–2024ರ ಮತದಾನವು ಮೇ 7ರಂದು ಜಿಲ್ಲೆಯಲ್ಲಿ ವಿವಿಧೆಡೆ ಸುಗಮವಾಗಿ ನಡೆಯಿತು.

ಬಳ್ಳಾರಿ ಲೋಕಸಭಾ ಕ್ಷೇತ್ರದ ಚುನಾವಣಾ ರಾಯಭಾರಿಯಾದ ಹೆಚ್.ಕೆ.ಕಾರಮಂಚಪ್ಪ ಅವರು ಮಲಪನಗುಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಮತಗಟ್ಟೆ ಸಂಖ್ಯೆ 232ರಲ್ಲಿ ಮತಚಲಾಯಿಸಿ ಮತ್ತು ಮತದಾನ ಮಾಡಿದ ಮತದಾರರಿಗೆ ಸಸಿ ವಿತರಣೆ ಮಾಡಿ ಪ್ರೇರಣೆ ನೀಡಿದರು.ಲಿಂಗತ್ವ ಅಲ್ಪಸಂಖ್ಯಾತರಿಂದ ಮತದಾನ: ಹಡಗಲಿ ಕ್ಷೇತ್ರದಲ್ಲಿ ಲಿಂಗತ್ವ ಅಲ್ಪಸಂಖ್ಯಾತರಾದ ಐ ರೇಣುಕಾ ಲಕ್ಯ ನಾಯ್ಕ್ ಅವರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಅಂಕ್ಲಿತಂಡದ ಮತಗಟ್ಟೆಗೆ ತೆರಳಿ ಮತದಾನ ಮಾಡಿದರು. ನರಸಾಪುರಮಾಗಾಣಿಯ ಲಿಂಗತ್ವ ಅಲ್ಪಸಂಖ್ಯಾತರಾದ ಜಕ್ಕಮ್ಮ ಜೋಗತಿ ಅವರು ನರಸಾಪುರಮಾಗಾಣಿಯ ಮತಗಟ್ಟೆಯಲ್ಲಿ ಮತದಾನ ಮಾಡಿದರು. ಹಗರಿಬೊಮ್ಮನಹಳ್ಳಿ ಕ್ಷೇತ್ರದಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಗೊಲ್ಲರಹಳ್ಳಿಯ ಮತಗಟ್ಟೆಯಲ್ಲಿ ಲಿಂಗತ್ವ ಅಲ್ಪಸಂಖ್ಯಾತರಾದ ರಾಮವ್ವ ಜೋಗತಿ ಅವರು ಮತದಾನ ಮಾಡಿದರು.ನವ ವಿವಾಹಿತರಿಂದ ಮತದಾನ: ಹಡಗಲಿ ತಾಲೂಕಿನ ಇಟ್ಟಗಿ ಗ್ರಾಮದ ಮತಗಟ್ಟೆ ಸಂಖ್ಯೆ 160ರಲ್ಲಿ ನವ ವಿವಾಹಿತರಾದ ಕರಿಬಸವರಾಜ ಹಾಗೂ ಮಮತ ಅವರು, ಹಗರಿಬೊಮ್ಮನಹಳ್ಳಿ ತಾಲೂಕಿನ ಬಾಚಿಗೊಂಡನಹಳ್ಳಿ ಗ್ರಾಮದ ಮತಗಟ್ಟೆ ಸಂಖ್ಯೆ 92ರಲ್ಲಿ ನವವಿವಾಹಿತರಾದ ರಾಹುಲ್ ಹಾಗೂ ಸಂಗೀತ ಅವರು ಹಾಗೂ ಜಿ ನಾಗಲಾಪುರ ಗ್ರಾಮ ಪಂಚಾಯತಿಯ ನಾಗಲಾಪುರ ಗ್ರಾಮದ 66 ಮತಗಟ್ಟೆಯಲ್ಲಿ ಸಹ ನವ ವಿವಾಹಿತರು ಮೇ 7ರಂದು ಮತದಾನ ಮಾಡಿ ಗಮನ ಸೆಳದರು. 70 ವಯಸ್ಸಿನ ಸಿದ್ದನಗೌಡ ಅವರು ದಂಪತಿ ಸಮೇತ ಮಲಪನಗುಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಮತಗಟ್ಟೆ ಸಂಖ್ಯೆ 230ಗೆ ಆಗಮಿಸಿ ಮತಚಲಾಯಿಸಿದರು.

ಮೊದಲ ಬಾರಿಗೆ ಮತದಾನ ಮಾಡಿದ ಸಂಭ್ರಮ: ಚಿತ್ತವಾಡಗಿಯ ಶ್ರೀ ವಿನೋಭಬಾವೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆಯಲ್ಲಿ ಮತದಾನ ಮಾಡಿದ ಹೊಸಪೇಟೆ ನಗರದ ನಿವಾಸಿ ಶ್ರೀಪ್ರಿಯಾ, ಹೂವಿನಹಡಗಲಿ ತಾಲೂಕಿನ ಅನಿತಾ, ದೀಪಾ, ಹಗರಿಹೊಮ್ಮನಹಳ್ಳಿ ತಾಲೂಕಿನ ಅಂಕಿತಾ ಅವರು ಮೊದಲ ಬಾರಿಗೆ ಮತದಾನ ಮಾಡಿದ ಸಂತಸವನ್ನು ಹಂಚಿಕೊಂಡರು. ಹೊಸಪೇಟೆ ತಾಲೂಕಿನ ಗ್ರಾಮ ಪಂಚಾಯಿತಿ ಕಲ್ಲಹಳ್ಳಿ ವ್ಯಾಪ್ತಿಯಲ್ಲಿ ಬರುವ ಮತಗಟ್ಟೆ ಸಂಖ್ಯೆ 210 ಹಾಗೂ 211ರಲ್ಲಿ 35 ಯುವ ಮತದಾರರು ಮತದಾನ ಮಾಡಿದರು. ಹಡಗಲಿ ತಾಲೂಕಿ ಹೋಳಲು ಗ್ರಾಮದಲ್ಲಿ ಪ್ರಥಮ ಬಾರಿಗೆ ಮತದಾನ ಮಾಡಿದ ಯುವ ಮತದಾರರು ಸಂತಸ ಹಂಚಿಕೊಂಡರು. ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಮಲಪನಗುಡಿ ಮತಗಟ್ಟೆ ಸಂಖ್ಯೆ 230ರಲ್ಲಿ ಯುವ ಮತದಾರರಾದ ವಾರಿಣಿ ಅವರು ಮತಚಲಾಯಿಸಿ ಮಾತನಾಡಿದರು.ವಿಕಲಚೇತನರಿಂದ ಉತ್ತಮ ಪ್ರತಿಕ್ರಿಯೆ: ಹೊಸಪೇಟೆ ತಾಲೂಕಿನ ಗಾದಿಗನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಿಶೇಷ ಚೇತನರು ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಗಳಿಗೆ ಆಗಮಿಸಿ ಮತದಾನ ಮಾಡಿದರು.ಅಧಿಕಾರಿಗಳಿಂದ ಮತದಾನ: ಹರಪನಹಳ್ಳಿ ಕ್ಷೇತ್ರದ ಉಪ್ಪಾರಗೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹೊಸ ಕಟ್ಟಡದಲ್ಲಿ ಸ್ಥಾಪಿಸಿರುವ ಸಾಂಪ್ರದಾಯಿಕ ಮತಗಟ್ಟೆಯಲ್ಲಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ್ ವೈ.ಎಚ್.ಅವರು ತಮ್ಮ ಮತ ಹಕ್ಕನ್ನು ಚಲಾಯಿಸಿದರು.

# ಹಕ್ಕು ಚಲಾಯಿಸುವಲ್ಲಿ ಯುವಕರನ್ನೇ ನಾಚಿಸುವ ಶತಾಯುಷಿಗಳು




ಬೆಳಗಾವಿ: ಜಿಲ್ಲೆಯಲ್ಲಿ ಇಬ್ಬರು ಶತಾಯುಷಿಗಳು ಮತಗಟ್ಟೆಗೆ ಬಂದು ಮತ ಚಲಾವಣೆ ಮಾಡಿದ್ದಾರೆ. ಅದರಲ್ಲೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ರಾಜೇಂದ್ರ ಕಲಘಟಗಿ ಯುವಕರನ್ನು ನಾಚಿಸುವಂತೆ, ಸ್ಕೂಟಿ ಮೇಲೆ ಬಂದು ಮತದಾನ ಮಾಡಿ ಎಲ್ಲರಿಗೂ ಮಾದರಿಯಾದರು.

ಹೌದು ಬೆಳಗಾವಿಯ 104 ವರ್ಷದ ಈ ಅಜ್ಜ ತಾವೇ ಸ್ಕೂಟಿ ಓಡಿಸಿಕೊಂಡು ಮತಗಟ್ಟೆಗೆ ಬಂದು ಮತ ಚಲಾಯಿಸಿದ್ದು, ಎಲ್ಲರ ಹುಬ್ಬೇರುವಂತೆ ಮಾಡಿತು. ನಗರದ ಅನಗೋಳದ ಸರ್ಕಾರಿ ಮರಾಠಿ ಹಿರಿಯ ಪ್ರಾಥಮಿಕ ಶಾಲೆ ನಂ.34 ರಲ್ಲಿ ಮತ ಹಾಕಿದರು.

ಇದೇ ವೇಳೆ, ಈ ಟಿವಿ ಭಾರತ ಜೊತೆಗೆ ಮಾತನಾಡಿದ ಶತಾಯುಷಿ ರಾಜೇಂದ್ರ ಕಲಘಟಗಿ, “ನನಗೆ ಬಹಳ ಖುಷಿಯಾಗುತ್ತಿದೆ. ಇದು ಪ್ರಜಾಪ್ರಭುತ್ವದ ಜಾತ್ರೆ, ದೊಡ್ಡ ಹಬ್ಬ. ಪ್ರತಿಯೊಬ್ಬರೂ ಕಡ್ಡಾಯವಾಗಿ ಮತ ಹಾಕಲೇಬೇಕು. ನನಗೆ 104 ವರ್ಷವಾದರೂ ಮತ ಚಲಾಯಿಸಬೇಕು ಎಂದು ಚನ್ನಮ್ಮ ನಗರದಿಂದ ಬಂದಿದ್ದೇನೆ. ಯಾವ ಚುನಾವಣೆಯಲ್ಲೂ ಮತದಾನದಿಂದ ನಾನು ವಂಚಿತನಾಗಿಲ್ಲ” ಎಂದು ನೆನಪಿಸಿಕೊಂಡರು.

ಮುಂದುವರೆದು, “ಈ ಚುನಾವಣೆ ಪರ್ವದಲ್ಲಿ ಪ್ರವಾಸ ಅಂತಾ ಯಾರೂ ಎಲ್ಲೂ ಹೋಗಬಾರದು. ವಿದೇಶದಲ್ಲಿ ನೆಲೆಸಿರುವ ನಮ್ಮ ಅದೇಷ್ಟೋ ಜನರು ದುಡ್ಡು ಖರ್ಚು ಮಾಡಿ ವಿಮಾನದಲ್ಲಿ ಬಂದು ವೋಟ್ ಹಾಕಿ ಹೋಗುತ್ತಾರೆ. ಆದರೆ, ನಾವು ಇಲ್ಲಿಯೇ ಇದ್ದು, ಬಿಸಿಲಿದೆ ಎಂದು ವೋಟ್ ಹಾಕಲು ಹೋಗುವುದಿಲ್ಲ ಎಂದರೆ ಹೇಗೆ..? ಇದು ದೇಶದ ಭವಿಷ್ಯ ನಿರ್ಧರಿಸುವ ಮಹತ್ವದ ಚುನಾವಣೆ. ಬಡವರು, ಮಧ್ಯಮ ವರ್ಗದವರು ಮತ ಹಾಕುತ್ತಾರೆ. ಆದರೆ, ಶ್ರೀಮಂತ ವರ್ಗ ಮನೆ ಬಿಟ್ಟು ಹೊರಗೆ ಬರುವುದಿಲ್ಲ. ಹಾಗಾಗಿ, ಶೇ.100ರಷ್ಟು ಮತದಾನ ದಾಖಲಾಗುತ್ತಿಲ್ಲ. ಸರ್ಕಾರಗಳು ನಮಗೆ ಎಲ್ಲ ವ್ಯವಸ್ಥೆ ಮಾಡಿದಾಗಲೂ ಈ ರೀತಿ ನಿರಾಸಕ್ತಿ ತೋರಿಸುವುದು ಸರಿಯಲ್ಲ” ಎಂದು ರಾಜೇಂದ್ರ ಕಲಘಟಗಿ ಬೇಸರ ಹೊರ ಹಾಕಿದರು.

103 ವರ್ಷದ ವೃದ್ಧೆಯಿಂದಲೂ ಮತದಾನ: ಕಾಗವಾಡ ತಾಲೂಕಿನ ಕೆಂಪವಾಡ ಗ್ರಾಮದ 103 ವಯಸ್ಸಿನ ಹಿರಿಯ ಮಹಿಳೆ ನೀಲವ್ವ ಗಾಳಿ ಅವರು ಉತ್ಸಾಹದಿಂದ ಮತ ಚಲಾಯಿಸಿದರು. ಮನೆ ಮನೆ ಮತದಾನ ಅಭಿಯಾನದಲ್ಲಿ ಭಾಗವಹಿಸಲು ನಿರಾಕರಿಸಿದ ಹಿರಿಯರು ಮತಗಟ್ಟೆಗೆ ಬಂದು ಮತ ಚಲಾಯಿಸುವುದಾಗಿ ತಿಳಿಸಿದರು. ಅದರಂತೆ ಇಂದು ಇಲ್ಲಿನ ಮತಗಟ್ಟೆ 90 ರಲ್ಲಿ ತಮ್ಮ ಪುತ್ರರೊಂದಿಗೆ ಆಗಮಿಸಿ ಮತ ಚಲಾಯಿಸಿದರು.

ಬೆಳಗಾವಿ ಜಿಲ್ಲೆಯಲ್ಲಿ ಅತೀ ಹೆಚ್ಚು ಶತಾಯುಷಿ ಮತದಾರರು: ಜಿಲ್ಲೆಯಲ್ಲಿ ಒಟ್ಟು 1,259 ಶತಾಯುಷಿ ಮತದಾರರಿದ್ದಾರೆ. ಈ ಪೈಕಿ ಕುಡಚಿ ಕ್ಷೇತ್ರದಲ್ಲಿ 196 ಶತಾಯುಷಿ ಮತದಾರರಿದ್ದಾರೆ. ಈ ಮೂಲಕ ಕುಡಚಿ 100 ವರ್ಷ ದಾಟಿದ ಮತದಾರರ ಸಂಖ್ಯೆಯಲ್ಲಿ ಮೊದಲ ಸ್ಥಾನ ಪಡೆದುಕೊಂಡಿದೆ. ಇನ್ನುಳಿದಂತೆ ರಾಯಭಾಗದಲ್ಲಿ 176, ಬೆಳಗಾವಿ ದಕ್ಷಿಣದಲ್ಲಿ 116, ಕಾಗವಾಡದಲ್ಲಿ 108, ಅರಬಾವಿಯಲ್ಲಿ 97 ಹಾಗೂ ಬೆಳಗಾವಿ ಗ್ರಾಮೀಣದಲ್ಲಿ 83, ಬೆಳಗಾವಿ ಉತ್ತರದಲ್ಲಿ 79, ಗೋಕಾಕದಲ್ಲಿ 73, ರಾಮದುರ್ಗದಲ್ಲಿ 56, ಯಮಕನಮರಡಿದಲ್ಲಿ 50 ಮಂದಿ ಶತಾಯುಷಿ ಮತದಾರರಿದ್ದಾರೆ. ಇನ್ನು ಹುಕ್ಕೇರಿ ಹಾಗೂ ಚಿಕ್ಕೋಡಿ – ಸದಲಗಾದಲ್ಲಿ ತಲಾ 45, ಬೈಲಹೊಂಗಲದಲ್ಲಿ 40, ಕಿತ್ತೂರಿನಲ್ಲಿ 27, ಸವದತ್ತಿಯಲ್ಲಿ 25, ನಿಪ್ಪಾಣಿಯಲ್ಲಿ 16, ಖಾನಾಪುರದಲ್ಲಿ 15, ಅಥಣಿಯಲ್ಲಿ 12 ಶತಾಯುಷಿ ಮತದಾರರಿದ್ದಾರೆ.

ದಾವಣಗೆರೆಯಲ್ಲೂ ಶತಾಯುಷಿ ವೃದ್ಧೆಯಿಂದ ಮತದಾನ: 102 ವರ್ಷದ ಯಲ್ಲಮ್ಮ ವೃದ್ಧೆ ಮತಗಟ್ಟೆಗೆ ಬಂದು ಮತದಾನ ಮಾಡಿದರು. ಹರಿಹರ ತಾಲೂಕಿನ ಹನಗವಾಡಿ ಗ್ರಾಮದ ಮತಗಟ್ಟೆಯಲ್ಲಿ ಮತದಾನ ಮಾಡಲಾಗಿದೆ.

# ಮಹಿಳಾ ಮತದಾರರಿಗೆ ’ಸಖಿ ಪಿಂಕ್ ಬೂತ್’



ಯರಗಟ್ಟಿ: ಮಹಿಳೆಯರಲ್ಲಿ ಮತದಾನ ಜಾಗೃತಿ ಮತ್ತು ಮಹಿಳಾ ಮತದಾನ ಪ್ರಮಾಣ ಹೆಚ್ಚಿಸಲು ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ಸಖಿ ಪಿಂಕ್ ಬೂತ್ ತೆರೆಯಲಾಗಿತ್ತು ಮಹಿಳೆಯರಿಗೆ ಸಂಭ್ರಮದಿಂದ ಮತಚಲಾಯಿಸಿದರು.ಲೋಕಸಭಾ ಚುನಾವಣೆ 2024ರ ಮತದಾನ ಮುಕ್ತಾಯಗೊಂಡು ಅಭ್ಯರ್ಥಿಗಳ ಭವಿಷ್ಯ ಮತಯಂತ್ರ ಸೇರಿದೆ. ಜು. 04ರ ಮಂಗಳವಾರ ಮತ ಎಣಿಕೆ ನಡೆಯಲಿದೆ. ಯರಗಟ್ಟಿ ತಾಲೂಕಿನಲ್ಲಿ ಶಾಂತಿಯುತವಾಗಿ ಮತದಾನ ನಡೆದಿದೆ. ಚುನಾವಣಾಧಿಕಾರಿ ಸ್ವೀಪ್ ಸಮಿತಿ ಅಧ್ಯಕ್ಷ ಯಶವಂತಕುಮಾರ ತಿಳಿಸಿದ್ದರು.ತಾಲೂಕಿನಲ್ಲಿ ಮತದಾನ ಶಾಂತಿಯುತವಾಗಿ ನಡೆದಿದ್ದು, ಮತದಾನ ಮುಕ್ತಾಯದ ನಂತರ ಅಂದಾಜು ಶೇ 72.25ರ ರಷ್ಟು ಪ್ರಮಾಣ ದಾಖಲಾಗಿದೆ. ಕಳೆದ ಎರಡು ಚುನಾವಣೆಗಳಿಗೆ ಹೋಲಿಕೆ ಮಾಡಿದರೆ ಇದು ದಾಖಲೆಯ ಮತದಾನವಾಗಿದೆ.

# ಬಳ್ಳಾರಿ ಲೋಕಸಭೆ ಚುನಾವಣೆ; ಜಿಲ್ಲೆಯಾದ್ಯಂತ ಸುಸೂತ್ರ, ಶಾಂತಿಯುತ ಮತದಾನ

# ಬಳ್ಳಾರಿ ಜಿಲ್ಲೆಯಲ್ಲಿ ಶೇ.73.59 ರಷ್ಟು ಮತದಾನ

(1 ನೇ ಪುಟದಿಂದ)

ಸಂಡೂರು – ಶೇ.56.97, ವಿಜಯನಗರ – ಶೇ.54.57 ರಷ್ಟು ಮತದಾನವಾಗಿದೆ.ಸಂಜೆ 05 ಗಂಟೆಯವರೆಗೆ ಒಟ್ಟು ಶೇ.68.94 ಮತದಾನ ಪ್ರಮಾಣವಾಗಿದ್ದು, ಬಳ್ಳಾರಿ ಗ್ರಾಮೀಣ – ಶೇ.67.53, ಬಳ್ಳಾರಿ ನಗರ – ಶೇ.60.33, ಹೂವಿನಹಡಗಲಿ – ಶೇ.70.72, ಹಗರಿಬೊಮ್ಮನಹಳ್ಳಿ–ಶೇ.72.12, ಕಂಪ್ಲಿ–ಶೇ.74.61, ಕೂಡ್ಲಿಗಿ–ಶೇ.73.29, ಸಂಡೂರು – ಶೇ.70.09, ವಿಜಯನಗರ – ಶೇ.65.61 ರಷ್ಟು ಮತದಾನವಾಗಿದೆ. ಕಳೆದ ಬಾರಿ 2019 ರಲ್ಲಿ ಲೋಕಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಗೆಯ ಹಡಗಲಿ ಕ್ಷೇತ್ರದಲ್ಲಿ ಶೇ.71.45, ಹಗರಿಬೊಮ್ಮನಹಳ್ಳಿ ಕ್ಷೇತ್ರ–ಶೇ.73.37, ವಿಜಯನಗರ–ಶೇ.68.59, ಕಂಪ್ಲಿ–ಶೇ.70.72, ಬಳ್ಳಾರಿ ಗ್ರಾಮೀಣ–ಶೇ.70.12, ಬಳ್ಳಾರಿ ನಗರ–ಶೇ.63.05, ಸಂಡೂರು–ಶೇ.71.16 ಮತ್ತು ಕೂಡ್ಲಿಗಿ ವಿಧಾನಸಭಾ ಕ್ಷೇತ್ರದಲ್ಲಿ ಶೇ.69.22 ರಷ್ಟು ಅಂದರೆ ಒಟ್ಟಾರೆ ಬಳ್ಳಾರಿ ಲೋಕಸಭೆ ಕ್ಷೇತ್ರದಲ್ಲಿ ಶೇ.69.59 ರಷ್ಟು ಮತದಾನವಾಗಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.ಅಲ್ಲದೆ ಈ ಹಿಂದಿನ ಬಳ್ಳಾರಿ ಲೋಕಸಭಾ ಕ್ಷೇತ್ರದ ಚುನಾವಣೆಗಳನ್ನು ಅವಲೋಕಿಸಿದಾಗ 2019 ರಲ್ಲಿ ಶೇ. 69.59, 2014 (ಉಪಚುನಾವಣೆ)– ಶೇ. 61.12, 2014– ಶೇ. 69.53 ಹಾಗೂ 2009 ರ ಚುನಾವಣೆಯಲ್ಲಿ ಶೇ. 61.43 ರಷ್ಟು ಮತದಾನವಾಗಿರುವುದು ದಾಖಲಾಗಿದೆ.